# ಕನಕಪುರ ಉಪನಗರ ಅಭಿವೃದ್ಧಿಗೆ ಸಲಹೆ ಪಡೆದ ಡಿಕೆಶಿ

ಕನಕಪುರ : ಕೇಂದ್ರ ಸರ್ಕಾರ ಕನಕಪುರ ಪಟ್ಟಣವನ್ನು ಉಪನಗರ ಸ್ಯಾಟ್‌ಲೈಟ್ ಟೌನ್ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಪಟ್ಟಣವನ್ನು ಅಭಿವೃದ್ದಿಪಡಿಸಲು ಯೋಜನೆ ಸಿದ್ಧಪಡಿಸುವ ನಿಟ್ಟಿನಲ್ಲಿ ತಾಲ್ಲೂಕಿನ ಅಧಿ ಕಾರಿಗಳು, ಜನಪ್ರತಿನಿಧಿಗಳು, ಸಾರ್ವಜನಿಕರು, ಹಲವು ಸಂಘ- ಸಂಸ್ಥೆಗಳ ಸಲಹೆ ಸಹಕಾರ ನೀಡುವಂತೆ ಶಾಸಕ ಡಿ.ಕೆ.ಶಿವ ಕುಮಾರ್ ಮನವಿ ಮಾಡಿದರು.



ಈ ಯೋಜನೆಯ ಸಂಬಂಧ ಕನಕಪುರ ಸರ್ವಾಂಗೀಣ ಅಭಿವೃದ್ದಿಗಾಗಿ ಎಲ್ಲಾ ಇಲಾಖೆಯ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸುವಂತೆ ಪುರಸಭೆಯ ಮುಖ್ಯಾಧಿಕಾರಿ ಕೆ.ಮಾಯಣ್ಣಗೌಡ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕರೆದಿದ್ದ ಸಭೆಯ ಅಧ್ಯಕ್ಷತೆ ವಹಿಸಿದ್ದ ಶಾಸಕ ಡಿ.ಕೆ.ಶಿವಕುಮಾರ್ ಎಲ್ಲಾ ಅಧಿಕಾರಿಗಳ ಪ್ರಸ್ತಾವನೆಯನ್ನು ಆಲಿಸಿ ಮಾತನಾಡಿ, ಗ್ರಾಮೀಣ ಪ್ರದೇಶದ ಶೇ.37ರಷ್ಟು ಜನತೆ ಪ್ರತಿದಿನ ಕನಕಪುರದಲ್ಲಿ ಸೇರುತ್ತಾರೆ. ಆದರೆ ನಗರದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದೆ, ಈ ಕೊರತೆ ನಿವಾರಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಕನಕಪುರವನ್ನು ಸ್ಯಾಟ್‌ಲೈಟ್ ಟೌನ್‌ಗಳ ಪಟ್ಟಿಗೆ ಸೇರಿಸಲಾಗಿದೆ ಎಂದರು.

ಕನಕಪುರ ಪ್ರವಾಸಿ ಮಂದಿರದ ಪಕ್ಕದಲ್ಲಿನ ಗುಡ್ಡದಲ್ಲಿ ರಾಕ್ ಪಾರ್ಕ್ ನಿರ್ಮಾಣಕ್ಕಾಗಿ ಸಮಿತಿ ರಚನೆಯಾಗಿದ್ದು, ಈ ಪಾರ್ಕಿಗಾಗಿ ಈವರೆವಿಗೂ ಹಣ ಬಿಡುಗಡೆಯಾಗಿಲ್ಲದ್ದರ ಬಗ್ಗೆ ವಿಷಾದಿಸಿದ ಅವರು ಪೈಪ್‌ಲೈನ್ ಕಾಮಗಾರಿ ಮುಗಿದ ನಂತರ ಉದ್ದೇಶಿತ ಸುಸಜ್ಜಿತ ಪಾರ್ಕ್ ನಿರ್ಮಾಣ ಮಾಡಲಿರುವುದಾಗಿ ತಿಳಿಸಿದರು. ನಂತರ ಹೌಸಿಂಗ್ ಬೋರ್ಡ್‌ನಿಂದ 300 ಎಕರೆ ಜಮೀನನ್ನು ಕೊಂಡುಕೊಳ್ಳಲು ಸಚಿವ ಸೋಮಣ್ಣರವರು ಮಂಜೂರಾತಿ ನೀಡಿದ್ದಾರೆ. ಈ ಪ್ರದೇಶದಲ್ಲಿ ಸುಸಜ್ಜಿತ ಯೋಜಿತ ನಗರ ನಿರ್ಮಿಸಲಾಗುವುದು ಎಂದರು.

ಸುಮಾರು 13 ಕೋಟಿ ರೂ. ವೆಚ್ಚದಲ್ಲಿ ಕನಕಪುರದ ಎಂ.ಜಿ.ರಸ್ತೆ ಅಭಿವೃದ್ಧಿಪಡಿಸಿದ್ದು, 3 ಕಿ.ಮಿಡೀ. ಜೋಡಿ ರಸ್ತೆ ನಿರ್ಮಿಸಲಾಗಿದೆ. 22 ಕೋಟಿ ರೂ. ವೆಚ್ಚದಲ್ಲಿ ಸಾತನೂರು ಹೋಬಳಿಯ 42 ಹಳ್ಳಿಗಳಿಗೆ ಕಾವೇರಿ ನೀರು ಒದಗ್ಗಿಸಲು ಮುಂದಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. ಪಟ್ಟಣದ ಜನತೆಗೆ ಕಾವೇರಿ ನೀರು ಯು.ಜಿ.ಡಿ. ಮತ್ತು ಸಮರ್ಪಕ ಚರಂಡಿ ವ್ಯವಸ್ಥೆ ಕಲ್ಪಿಸಿ, ಕಸ ವಿಲೇವಾರಿಗೆ ಸೂಕ್ತ ಸ್ಥಳ ಗುರುತಿಸಲಾಗುವುದು ಎಂದು ವಿವರಿಸಿದರು.



ಮಂದಿನ 20 ವರ್ಷಗಳಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಪಟ್ಟಣಕ್ಕೆ ಒದಗಿಸಲು ಉಪನಗರ ಯೋಜನೆಯಡಿ ರೂಪುರೇಷೆ ತಯಾರಿಸಲಾಗುವುದು ಮತ್ತು ಬೆಂಗಳೂರು ನಗರ ಜನತೆ ಪಡೆಯುತ್ತಿರುವ ಸೌಲಭ್ಯಗಳನ್ನು ಈ ತಾಲೂಕಿನ ಜನತೆಗೆ ಒದಗಿಸಲು ಚಿಂತನೆ ನಡೆಸಲಾಗಿದೆ ಎಂದರು.

ಸ್ಯಾಟ್‌ಲೈಟ್ ಟೌನ್ ಯೋಜನಾ ಸಮಾಲೋಚಕರಾದ ವಿದ್ಯಾಧರ್ ಎಸ್ ಒಡೆಯರ್ ಸ್ಯಾಟ್‌ಲೈಟ್ ಟೌನ್ ಅಮೆರಿಕದಲ್ಲಿ ಯಶಸ್ಸು ಕಂಡಿದೆ. ಇದನ್ನು ಭಾರತದಲ್ಲಿ ಪ್ರಾಯೋಗಿಕವಾಗಿ ಜಾರಿ ತರಲು ಕೇಂದ್ರ ಸರ್ಕಾರ ನಿರ್ಧರಿಸಿ ಈ 7 ನಗರಗಳನ್ನು ಆಯ್ಕೆ ಮಾಡಲಾಗಿದೆ. ಇದರಲ್ಲಿ ಕನಕಪುರ ಸೇರಿರುವುದರಿಂದ ಕೀರ್ತಿ ಡಿ.ಕೆ.ಶಿವ ಕುಮಾರ್‌ರವರಿಗೆ ಸೇರಬೇಕೆಂದರು. ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಕನಕಪುರ ಪಟ್ಟಣ ಸೌಲಭ್ಯಗಳ ಕೊರತೆ ಹೆಚ್ಚಾಗಿದೆ. ಕನಕಪುರ ಉಪನಗರವನ್ನಾಗಿ ಅಭಿವದ್ದಿಪಡಿಸುವ ಜನತೆಗೆ ಬೇಕಿರುವ ಮೂಲ ಸೌಕರ್ಯ ಒದಗಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಈ ಸಭೆಯಲ್ಲಿ ವಿಧಾನಪರಿಷತ್ ಸದಸ್ಯರಾದ ಎಸ್.ರವಿರವರು, ಪುರಸಭಾಧ್ಯಕ್ಷರಾದ ಆರ್.ಕೃಷ್ಣಮೂರ್ತಿ ದಂಡಾಧಿಕಾರಿಗಳಾದ ಡಾ.ದಾಕ್ಷಾಯಿ ಪು.ಉಪಾಧ್ಯಕ್ಷರಾದ ನಿರ್ಮಲ ಗುಂಡ ಕಾರ್ಯನಿರ್ವಾಹಕ ಅಧಿಕಾರಿ ಜೆ.ಜೆ.ಸ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಡಿ.ವಿಜಯ್ ದೇವ್, ಕೆ.ಎನ್.ದೀ ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷ ನಟರಾ ಹಾಗೂ ಇಲಾಖೆಯ ಎಲ್ಲಾ ಅಧಿಕಾರಿ ಹಾಜರಿದ್ದು, ಅವರವರ ಸಲಹೆಗಳನ್ನು ನೀಡಿದರು.



ಇದೇ ಸಭೆಯಲ್ಲಿ ನೆರೆದಿದ್ದ ಪತ್ರಕರ್ತರ ಪರವಾಗಿ ಕೆ.ಸಬ್ಬಾಳಯ್ಯನವರು ಸಲಹೆಯನ್ನು ನೀಡಿ, ಪತ್ರಕರ್ತರ ಸಮೂಹಕ್ಕೆ ನಿವೇಶನ ನೀಡುವಂತೆ ಶಾಸಕರಲ್ಲಿ ಮನವಿ ಮಾಡಿದರು....